# ಕರ್ನಾಟಕ ವಿಧಾನ ಪರಿಷತ್ತು

| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 553 (690) |
|---|---|
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 14.12.2020 |
| ಉತ್ತರಿಸಬೇಕಾದ ಸಚಿವರು | ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) |

**ಪ್ರಶ್ನೆ**

(ಅ) ಪ್ರಥಮ ದರ್ಜೆ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಹಾಗೂ ಇವರಿಗೆ ಮಾಸಿಕ ನೀಡಲಾಗುತ್ತಿರುವ ವೇತನ ಎಷ್ಟು; (ವರ್ಗವಾರು ವಿವರ ನೀಡುವುದು)

**ಉತ್ತರ**

<u>ಕಾಲೇಜು ಶಿಕ್ಷಣ</u>

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಳೆದ 2019-20ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಒಟ್ಟು 14447 ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಬಳಸಿಕೊಳ್ಳಲಾಗಿದೆ ಹಾಗೂ ಪ್ರಸ್ತುತ 2021ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ.

ಸರ್ಕಾರದ ಆದೇಶ ಸಂ: ಇಡಿ 66 ಡಿಸಿಇ 2017, ದಿನಾಂಕ: 04.04.2017ರನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಕನಿಷ್ಠ ಶೇ. 55 ರಷ್ಟು ಅಂಕಗಳನ್ನು ಪಡೆದು ಎನ್‌ಇಟಿ/ಎಸ್‌ಎಲ್‌ಟಿ ಅಥವಾ ಪಿ.ಹೆಚ್.ಡಿ. ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಗೌರವಧನ ರೂ. 13000/- ಹಾಗೂ ಸ್ನಾತಕೋತ್ತರ ಪದವಿ ಪಡೆದ ಅತಿಥಿ ಉಪನ್ಯಾಸಕರಿಗೆ ರೂ. 11,000/- ಗಳನ್ನು ಪಾವತಿಸಲಾಗುತ್ತಿದೆ.

<u>**ವಿಶ್ವವಿದ್ಯಾಲಯ**</u>

| ವಿಶ್ವವಿದ್ಯಾನಿಲಯದ ಹೆಸರು | ಅತಿಥಿ ಉಪನ್ಯಾಸಕರ ಸಂಖ್ಯೆ | ವೇತನದ ವಿವರ (ಪ್ರತಿ ತಿಂಗಳಿಗೆ) |
|---|---|---|
| ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ | 17 | • ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಿಗೆ ರೂ. 25,000/-<br>• ಅರೆಕಾಲಿಕ ಅತಿಥಿ ಉಪನ್ಯಾಸಕರಿಗೆ ರೂ. 12,000/- |
| ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ | 28 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 22,500/-.<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 19,500/-.<br>• ಅರೆಕಾಲಿಕ ಉಪನ್ಯಾಸಕರಿಗೆ ರೂ. 10,000/-. |
| ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ | ಯಾವುದೇ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡಿರುವುದಿಲ್ಲ. | |
| ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯ | 47 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 25,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 22,000/- |

| | | | | |
|---|---|---|---|---|
| | | | | • ಅರೆಕಾಲಿಕ ಉಪನ್ಯಾಸಕರಿಗೆ ರೂ.11,000 ರಿಂದ ರೂ. 13,000/-ರವರೆಗೆ. |
| | | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ | 92 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 20,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 15,000/-<br>• ಅರೆಕಾಲಿಕ ಉಪನ್ಯಾಸಕರಿಗೆ ರೂ. 10,000/-. |
| | | ದಾವಣಗೆರೆ ವಿಶ್ವವಿದ್ಯಾನಿಲಯ | 43 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 22,000/-<br>• ಸ್ನಾತಕೋತ್ತರ/M.Phil ಆದವರಿಗೆ ರೂ. 15,000/- |
| | | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ | 33 | ರೂ. 25000/- |
| | | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ | 38 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 22,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 20,000/-<br>• ಅರೆಕಾಲಿಕ ಉಪನ್ಯಾಸಕರಿಗೆ ರೂ.8000 ರಿಂದ ರೂ. 8500/- ರವರೆಗೆ. |
| | | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ | 01 | ರೂ. 45,000/- |
| | | ಕನ್ನಡ ವಿಶ್ವವಿದ್ಯಾನಿಲಯ | ಯಾವುದೇ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡಿರುವುದಿಲ್ಲ. | |
| | | ತುಮಕೂರು ವಿಶ್ವವಿದ್ಯಾನಿಲಯ | 86 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 27,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 23,000/- |
| | | ಮಂಗಳೂರು ವಿಶ್ವವಿದ್ಯಾನಿಲಯ | 335 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 30,000/-<br>• ಪಿಹೆಚ್‌ಡಿ ಹೊಂದಿರುವವರಿಗೆ ರೂ. 27,000/-.<br>• ಯುಜಿಸಿ ಮಾರ್ಗಸೂಚಿಯನ್ವಯ NET/SLET ಪಡೆದವರಿಗೆ ರೂ. 25,000/-<br>• ಮತ್ತು NET/SLET ಪಡೆಯದವರಿಗೆ ರೂ. 20,000/- |
| | | ಗುಲ್ಬರ್ಗ ವಿಶ್ವವಿದ್ಯಾನಿಲಯ | 340 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET |

| | | | | |
|---|---|---|---|---|
| | | | | ಪಡೆದವರಿಗೆ ರೂ. 24,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 22,000/-. |
| | | ಕುವೆಂಪು ವಿಶ್ವವಿದ್ಯಾನಿಲಯ | 327 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 20,700/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 17,250/- |
| | | ಮೈಸೂರು ವಿಶ್ವವಿದ್ಯಾನಿಲಯ | 836 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 28,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 24,000/-. |
| | | ಬೆಂಗಳೂರು ವಿಶ್ವವಿದ್ಯಾನಿಲಯ | 430 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 36,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 25,000/-. |
| | | ಕರ್ನಾಟಕ ವಿಶ್ವವಿದ್ಯಾನಿಲಯ | 519 | • ಯುಜಿಸಿ ಪ್ರೊಫೆಷನಲ್ ರೂ. 30,000/- ಮತ್ತು ನಾನ್‌ಪ್ರೊಫೆಷನಲ್ ರೂ. 28,000/-<br>• ನಾನ್ ಯುಜಿಸಿ ಪ್ರೊಫೆಷನಲ್ ರೂ. 26,000/- ಮತ್ತು ನಾನ್ ಪ್ರೊಫೆಷನಲ್ ರೂ. 24,000/-. |
| | | ಬೆಂಗಳೂರು ನಗರ ವಿಶ್ವವಿದ್ಯಾನಿಲಯ | 86 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 50,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 40,000/-. |
| | | ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ | 49 | • ಯುಜಿಸಿ ಮಾರ್ಗಸೂಚಿಯನ್ವಯ ಪಿಹೆಚ್‌ಡಿ ಮತ್ತು NET/SLET ಪಡೆದವರಿಗೆ ರೂ. 36,000/-<br>• ಪಿಹೆಚ್‌ಡಿ ಮತ್ತು NET/SLET ಪಡೆಯದವರಿಗೆ ರೂ. 28,000/-. |
| (ಆ) | ಸದರಿಯವರಿಗೆ ವೇತನ ಪರಿಷ್ಕರಣೆ ಮಾಡಲು ಸರ್ಕಾರ ಚಿಂತಿಸುವುದೇ; | ಪ್ರಸ್ತುತ ಪಾವತಿಸಲಾಗುತ್ತಿರುವ ಮಾಸಿಕ ಗೌರವಧನದ ಮೊತ್ತವನ್ನು ಪರಿಷ್ಕರಿಸುವ ಸಂಬಂಧ ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದಂತೆ ಪ್ರಸ್ತುತ ರಾಜ್ಯದಲ್ಲಿ ಕೋವಿಡ್-19 ತಲೆದೂರಿರುವ ಹಿನ್ನಲೆಯಲ್ಲಿ ಉಂಟಾಗಿರುವ ಆರ್ಥಿಕ ಮುಗಟ್ಟಿನ ಹಾಗೂ ಈ ಸಂಬಂಧ ಇರುವ ಆರ್ಥಿಕ ನಿರ್ಬಂಧನೆಯ ಹಿನ್ನಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಗೌರವಧನವನ್ನು ಪರಿಷ್ಕರಿಸಿರುವುದಿಲ್ಲ. | | |
| ಇ) | ಹಾಗಾದರೆ, ಯಾವ ಪ್ರಮಾಣದಲ್ಲಿ ಯಾವ ಅವಧಿಯಲ್ಲಿ ಪರಿಷ್ಕರಣೆ ಮಾಡಲಾಗುವದು; | | | |

| | | |
|---|---|---|
| | | ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವೇತನ ಪರಿಷ್ಕರಣೆ ಕುರಿತು ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |
| ಈ) | ಸದರಿಯವರಲ್ಲಿ ಯು.ಜಿ.ಸಿ. ವಿದ್ಯಾರ್ಹತೆ ಪಡೆದಿರುವವರನ್ನು ಸಕ್ರಮಗೊಳಿಸಲು ವಿಶೇಷ ನಿಯಮಾವಳಿಯನ್ನು ಸರ್ಕಾರ ರೂಪಿಸುವುದೇ? | ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಉಂಟಾಗುವ ಕಾರ್ಯಭಾರವನ್ನು ಮೊದಲು ಆಯಾ ಕಾಲೇಜಿನ ಖಾಯಂ ಅಧ್ಯಾಪಕರುಗಳಿಗೆ ಹಂಚಿಕೆ ಮಾಡಿ, ತದನಂತರ ಉಳಿಕೆಯಾಗುವ ಹೆಚ್ಚುವರಿ ಕಾರ್ಯಭಾರಕ್ಕೆ ಆಯಾ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತಾತ್ಕಾಲಿಕವಾಗಿ ಕಲಾ ಮತ್ತು ವಾಣಿಜ್ಯ ವಿಷಯಕ್ಕೆ ವಾರಕ್ಕೆ ಗರಿಷ್ಠ 8 ಗಂಟೆ ಹಾಗೂ ವಿಜ್ಞಾನ ವಿಷಯಕ್ಕೆ 10 ಗಂಟೆಗಳ ಕಾರ್ಯಭಾರಕ್ಕೆ ಮಾತ್ರ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೆ, ಅತಿಥಿ ಉಪನ್ಯಾಸಕರನ್ನು ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಮಾತ್ರ ಆಯ್ಕೆ ಮಾಡಿಕೊಳ್ಳಲಾಗುತ್ತಿದ್ದು, ಯಾವುದೇ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿಲ್ಲ. ಆದ್ದರಿಂದ ಅವರುಗಳ ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ಖಾಯಂ ಮಾಡಲು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಅಲ್ಲದೇ, ಕರ್ನಾಟಕ ಆಡಳಿತ ನ್ಯಾಯಮಂಡಳಿಯು (ಮಾನ್ಯ ಸರ್ವೋಚ್ಚ ನ್ಯಾಯಲಯದ ಸಂವಿಧಾನ ಪೀಠವು ಉಮಾದೇವಿ ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಆಧರಿಸಿ) ಸೇವಾ ಸಕ್ರಮಾತಿ ಕೋರಿ ಅತಿಥಿ ಉಪನ್ಯಾಸಕರುಗಳು ಸಲ್ಲಿಸಿದ ಅರ್ಜಿಗಳನ್ನು ವಜಾಗೊಳಿಸಿರುವ ಹಿನ್ನಲೆಯಲ್ಲಿ ನಿಯಮಾನುಸಾರ ನೇಮಕವಾಗದಿರುವ ಅತಿಥಿ ಉಪನ್ಯಾಸಕರ ನೇಮಕಾತಿಗಳನ್ನು ಸಕ್ರಮಾತಿಗೊಳಿಸಲು ಅವಕಾಶವಿರುವುದಿಲ್ಲ. |

**ಇಡಿ 229 ಡಿಪಿಇ 2020**

**(ಡಾ. ಅಶ್ವಥ್ ನಾರಾಯಣ ಸಿ.ಎನ್.)**
**ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)**